ಸದನವು ಬೆಳಿಗ್ಗೆ 11.08 ಗಂಟೆಗೆ ಸಮಾವೇಶಗೊಂಡಿತು

ಮಾನ್ಯ ಸಭಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು

(ಕರ್ನಾಟಕ ಜನತಾ ಪಕ್ಷದ ಸದಸ್ಯರು ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

(ಗೊಂದಲ)

ಶ್ರೀ ಆರ್. ಅಶೋಕ: ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದ ಶಾಸಕರಲ್ಲಿ ಒಬ್ಬರೂ ಕೂಡ ಸದನದಲ್ಲಿ ಉಪಸ್ಥಿತರಿಲ್ಲ ಒಂದಿಬ್ಬರನ್ನು ಬಿಟ್ಟರೆ ಮಂತ್ರಿಗಳೂ ಸಹ ಯಾರೂ ಇಲ್ಲ. ಆಡಳಿತ ಪಕ್ಷದವರಿಗೆ ಇಷ್ಟವಿಲ್ಲವೆಂದರೆ ಸದನ ನಡೆಸ ಬೇಡಿ. ಇಷ್ಟೊಂದು ದುಡ್ಡು ಖರ್ಚು ಮಾಡಿ ಏನು ಪ್ರಯೋಜನ? ಅವರಿಗೆ ನಾಚಿಕೆಯಾಗಬೇಕು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಿನ್ನೆಯೆ ಇಂದಿನ ಅಧಿವೇಶನ ಬೆಳಿಗ್ಗೆ 11 ಗಂಟೆಗೆ ಸೇರುತ್ತದೆ ಎಂದು ಎಲ್ಲರಿಗೂಗೊತ್ತಿದೆ. ಹಾಗಿದ್ದರೂ ಯಾರೂ ಸದನಕ್ಕೆ ಬಂದಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಪಾರ್ಟಿ ಮೀಟಿಂಗ್ ನಡೆಯುತ್ತಿದೆ, ಇನ್ನೇನು ಎಲ್ಲಾ ಶಾಸಕರೂ ಬಂದು ಬಿಡುತ್ತಾರೆ

(ಗೊಂದಲ)

ಅಧ್ಯಕ್ಷರು: ಎಲ್ಲಾ ಶಾಸಕರು ಬಂದು ಬಿಡುತ್ತಾರೆ ಬಿಡಿ

(ಗೊಂದಲ)

ಶ್ರೀ. ಆರ್.ವಿ. ದೇಶಪಾಂಡೆ: ಇನ್ನೇನು ಎಲ್ಲರೂ ಬರುತ್ತಾರೆ

(ಗೊಂದಲ)

ಅಧ್ಯಕ್ಷರು ಇನ್ನೇನು 2–3 ನಿಮಿಷಗಳಲ್ಲಿ ಎಲ್ಲರೂ ಬರುತ್ತಾರೆ

(ಗೊಂದಲ)

ಅಧ್ಯಕ್ಷರು ನಿಮ್ಮ ಸಿಟ್ಟನ್ನು ತೋರಿಸಿದ್ದೀರಿ, ಸಾಕು

(ಗೊಂದಲ)

ಅಧ್ಯಕ್ಷರು: ನಿಮ್ಮ ಸಿಟ್ಟನ್ನು ಸರ್ಕಾರದವರು ಗಮನಿಸಿದ್ದಾರೆ

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ. ಸದನಕ್ಕೆ ಅವರು ಗೌರವ ಕೊಡುತ್ತಿಲ್ಲ

(ಗೊಂದಲ)

ಅಧ್ಯಕ್ಷರು: Party meeting ಇದೆಯಂತೆ. ಇನ್ನೇನು 2–3 ನಿಮಿಷಗಳಲ್ಲಿ ಬಂದು ಬಿಡುತ್ತಾರೆ.

(ಗೊಂದಲ)

ಅಧ್ಯಕ್ಷರು: ನೋಡಿ, ಬಂದೇ ಬಿಟ್ಟರು!

(ಗೊಂದಲ)

ಶ್ರೀ ಆರ್.ವಿ ದೇಶಪಾಂಡೆ. ಎಲ್ಲಾ ಶಾಸಕರೂ ಬರುತ್ತಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಸದನದ ಕಲಾಪ ನಡೆಯಲು co-operate ಮಾಡಿ

(ಗೊಂದಲ)

ಅಧ್ಯಕ್ಷರು: ಸಾಕು, ಎಲ್ಲರೂ ಬಂದಿದ್ದಾರೆ ಈಗ ಕಲಾಪ ನಡೆಸೋಣ

(ಗೊಂದಲ)